REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 12 । ಜೂನ್ 29, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ದಿನಾಂಕ : 25.06.2022ರಂದು ಬೆಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ




**ಬೆಂಗಳೂರು :** ದಿನಾಂಕ : 25.06.2022ರಂದು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಮತ್ತು ಎಸ್.ಟಿ.ಸಿ.ಐ ಪ್ರೈಮರಿ ಡೀಲರ್ ಲಿ., ಇವರ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ಉದ್ಘಾಟಿಸಿ, ಮಾತನಾಡುತ್ತಾ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸಮಸ್ಯೆಗಳ ಬಗ್ಗೆ ಸರಿಯಾಗಿ ಹೇಳಿಕೊಳ್ಳಲು ಆಗುತ್ತಿಲ್ಲ. ಅಂದರೆ ಕಮ್ಯೂನಿಕೇಷನ್ ಅಂತರ ಇದೆ. ಅಂದರೆ ಭಾಷೆ ನಿಮಗೆ ಒಂದು ಸಮಸ್ಯೆಯಾಗುತ್ತಿದೆ. ನಮ್ಮ ಸುತ್ತೋಲೆ 20 ರಿಂದ 30 ಪುಟ ಇರುತ್ತದೆ. ಅದನ್ನು ನಾವು ಸರಿಯಾಗಿ ತಿಳಿದುಕೊಳ್ಳುವುದಿಲ್ಲ. ಕಮ್ಯೂನಿಕೇಷನ್ ಗ್ಯಾಪ್ ಇರುವುದರಿಂದ ನಿಮ್ಮ ಸಮಸ್ಯೆಗಳನ್ನು ನಾವು ಆರ್‌ಬಿಐಗೆ ತಿಳಿಸಿ, ನಾವು ಅವರಿಗೆ ಅರ್ಥ ಮಾಡಿಸಬೇಕು. ಉತ್ತರಪ್ರದೇಶ, ಬಿಹಾರ ರಾಜ್ಯಗಳ ಯುವ ಆರ್‌ಬಿಐ ಅಧಿಕಾರಿಗಳನ್ನು ನಿಮ್ಮ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ತಪಾಸಣೆಗೆ ಕಳುಹಿಸಿದಾಗ ಅವರಿಗೂ ನಿಮಗೂ ಭಾಷಾ ವ್ಯತ್ಯಾಸವಾಗುತ್ತದೆ. ಇಂತಹ ಸಂದರ್ಭದಲ್ಲಿ ನಾವು ಅವರ ಜೊತೆ ಸಮಾಲೋಚನೆ ಮಾಡುತ್ತೇವೆ. ಕೋವಿಡ್‌ನಿಂದಾಗಿ ಭಾರತೀಯ ರಿಜರ್ವ ಬ್ಯಾಂಕ್ ನೀಡುವ ತರಬೇತಿ ಕಡಿಮೆಯಾಗಿದೆ. ನಿಮ್ಮ ಬ್ಯಾಂಕುಗಳಲ್ಲಿ ಎಕ್ಸಪರ್ಟ್ ಸಲಹೆಗಾರರು ಇರಬೇಕು ಅನ್ನೊಂದು ನನ್ನ ಅಭಿಪ್ರಾಯ. ಪಟ್ಟಣ ಸಹಕಾರ ಬ್ಯಾಂಕುಗಳು ಮನೆ ಮನೆಗೂ ಬ್ಯಾಂಕಿಂಗ್ ವ್ಯವಸ್ಥೆಯನ್ನು ಸುಲಭವಾಗಿ ನೀಡಬಹುದು. ನಿಮಗೆ ಕೆವೈಸಿ ತುಂಬಾ ಸುಲಭವಾಗಿದೆ. ಎಲ್ಲ ಜನರೊಂದಿಗೆ ಸಂಪರ್ಕ ಹೊಂದಿರುತ್ತೀರಿ. ಆದ್ದರಿಂದ ನೀವು ಒಳ್ಳೆಯ ಬ್ಯಾಂಕಿಂಗ್ ಸೇವೆ ಒದಗಿಸಬಹುದು. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಕಾರ್ಪೋರೇಟ್ ಗವರ್ನನ್ಸ್, ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಇವು ಸ್ವಲ್ಪ ಕಷ್ಟವಾಗಿದೆ. ಈಗ ಭಾರತೀಯ ರಿಜರ್ವ್ ಬ್ಯಾಂಕಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕೃತವಾಗಿದೆ. ಏಕೆಂದರೆ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಬಲಿಷ್ಠಗೊಳಿಸಬೇಕೆಂಬ ಉದ್ದೇಶದಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಮೇಲೆ ಹೆಚ್ಚಿನ ಗಮನ ನೀಡಲಾಗುತ್ತಿದೆ. ಹೊರತು ಭಾರತೀಯ ರಿಜರ್ವ್ ಬ್ಯಾಂಕ್ ಪಟ್ಟಣ ಬ್ಯಾಂಕುಗಳ ಮೇಲೆ ಬೆನ್ನು ಬಿದ್ದಿಲ್ಲ.

ನಮ್ಮ ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳು ಮಹಾಮಂಡಳದಷ್ಟು ಒಳ್ಳೆಯ ಮಹಾಮಂಡಳ ದೇಶದಲ್ಲಿ ಎಲ್ಲಿಯೂ ಇಲ್ಲ. ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ತಂದೆ-ತಾಯಿ ಇದ್ದ ಹಾಗೆ ಇದೆ. ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲ ಸಾಹೇಬರವರ ನೇತೃತ್ವದಲ್ಲಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

3ನೇ ಪುಟಕ್ಕೆ...







2 2026ರ ಮಾರ್ಚ್‌ವರೆಗೂ ಜಿಎಸ್‌ಟಿ ಪರಿಹಾರ

4 ಕೌಶಲ್ಯ ತರಬೇತಿಯಿಂದ ಕುಟುಂಬ ನಿರ್ವಹಣೆ : ಪ್ರಕಾಶ ತಪಶೆಟ್ಟಿ

7 ನಿಮ್ಮ ಪ್ರಶ್ನೆ - ನಮ್ಮ ಉತ್ತರ

## ಅತ್ಮೀಯ ಸಹಕಾರಿಗಳೇ...



### ಮುಂದಿನ ದಿನಗಳಲ್ಲಿ ನಮ್ಮ ಮತ್ತು ಆರ್.ಬಿ.ಐ. ನಡುವೆ ಪರಸ್ಪರ ಸಮಾಲೋಚನೆ, ಸಂವಹನ ಸುಲಭವಾಗಿ ನಡೆಯಲಿ

ನಮ್ಮ ಮಹಾಮಂಡಳ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿ ವರ್ಗದವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಉನ್ನತ ಶಿಕ್ಷಣ ಸಂಸ್ಥೆಗಳ ಹಾಗೂ ನುರಿತ ವಿಷಯ ತಜ್ಞರ ಮೂಲಕ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಗತ್ಯ ಪೂರಕ ಶಿಕ್ಷಣವನ್ನು ವ್ಯವಸ್ಥೆ ಮಾಡುತ್ತಿದೆ. ಇದು ಆಡಳಿತ ಮಂಡಳಿ ನಿರ್ದೇಶಕರಿಗೆ, ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಪ್ರಚಲಿತ ಬ್ಯಾಂಕಿಂಗ್ ಕ್ಷೇತ್ರದ ವಿದ್ಯಮಾನದ ಕುರಿತ ಅರಿವು ಬೆಳಸಿಕೊಳ್ಳಲು ಸಹಾಯವಾಗುತ್ತದೆ. ಸಹಕಾರ ಬ್ಯಾಂಕುಗಳು ಉತ್ತಮ ರೀತಿಯಲ್ಲಿ ಗ್ರಾಹಕ ಸ್ನೇಹಿ ಸಂಸ್ಥೆಯಾಗಿ ಬೆಳೆಯಲು ಸಹಾಯಕವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ಮಹಾಮಂಡಳ ದೇಶದಲ್ಲೇ ಮೊದಲ ಬಾರಿಗೆ ಸಹಕಾರ ಶಿಕ್ಷಣ ವ್ಯವಸ್ಥೆಯಲ್ಲಿ ತಂತ್ರಜ್ಞಾನಾಧಾರಿತ, ಅಂತರ್ಜಾಲಾಧಾರಿತ ತರಬೇತಿ ಕೋರ್ಸ್ ಅನ್ನು 2015 ರಿಂದ ನೀಡುತ್ತಾ ಬಂದಿದ್ದು ಇಂದಿಗೂ ಇದು ಯಶಸ್ವಿಯಾಗಿ ನಡೆಯುತ್ತಿದೆ. ಈ ಕಾರಣಕ್ಕಾಗಿಯೇ ನಾನು, ಸಹಕಾರ ಕ್ಷೇತ್ರದಲ್ಲಿ ಶಿಕ್ಷಣ-ತರಬೇತಿ ನಿರಂತರವಾಗಿ ನಡೆಯುತ್ತಿರಬೇಕು ಎಂದು ಬಯಸುತ್ತೇನೆ.

ಮೊನ್ನೆ ಭಾನುವಾರ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡರವರು ಭಾಗವಹಿಸಿದ್ದು ಮಹತ್ವದಾಗಿತ್ತು. ಅವರು ತಮ್ಮ ಭಾಷಣದಲ್ಲಿ ಒಂದು ಮಹತ್ವದ ಮಾತನ್ನು ಹೇಳಿದ್ದಾರೆ. ಸಹಕಾರ ಬ್ಯಾಂಕುಗಳಿಗೂ ಆರ್.ಬಿ.ಐ. ನಡುವೆ ಭಾಷೆ ಸಮಸ್ಯೆ ಇರುವುದರಿಂದ ಪರಸ್ಪರ ಸಮಾಲೋಚನೆ, ಸಂವಹನ ಸಾಧ್ಯವಾಗುತ್ತಿಲ್ಲ ಎಂದು. ಅಂದರೆ, ಆರ್.ಬಿ.ಐ.ಗೆ ನಮ್ಮ ಸಮಸ್ಯೆ ಏನೂ ಅನ್ನುವುದು ಅರ್ಥವಾದಂತಿದೆ. ಇದನ್ನು ಪರಿಹರಿಸುವ, ಅರ್ಥಮಾಡಿಸುವ ಮಾತುಗಳನ್ನೂ ಶ್ರೀಮತಿ ಮೀನಾಕ್ಷಿ ಗಡರವರು ಹೇಳಿದ್ದಾರೆ. ಹಾಗೆಯೇ, ನಮ್ಮ ಮಹಾಮಂಡಳವನ್ನು ದೇಶದಲ್ಲೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮಹಾಮಂಡಳವೆಂದು ಶ್ಲಾಘಿಸಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಪ್ರಸ್ತುತ ಕೇಂದ್ರ ಸರ್ಕಾರ ಸಹಕಾರ ಕ್ಷೇತ್ರದತ್ತ ಗಮನ ಹರಿಸುವ ಸಲುವಾಗಿಯೇ ಸಚಿವಾಲಯವನ್ನು ಸೃಜಿಸಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಮೇಲೆ ಹೆಚ್ಚಿನ ಗಮನ ಕೇಂದ್ರೀಕೃತವಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸದೃಡಗೊಳಿಸಬೇಕೆಂಬ ಉದ್ದೇಶವೂ ಇದ್ದಂತಿದೆ. ಇದು ಸ್ವಾಗತಾರ್ಹವಾದದ್ದು. ತಾನು ಆರ್.ಬಿ.ಐ. ಉನ್ನತಾಧಿಕಾರಿ ಎನ್ನುವ ಬಿಗುವಿನ ಮನೋಭಾವವಿಲ್ಲದೆ, ನಮ್ಮ ಸದಸ್ಯರೊಂದಿಗೆ ಬೆರೆತು, ನಮ್ಮ ಸಮಸ್ಯೆಗಳನ್ನು ಆಲಿಸುವ ಕರ್ನಾಟಕದವರೇ ಆದ ಶ್ರೀಮತಿ ಮೀನಾಕ್ಷಿ ಗಡ ಅವರು, ಭಾರತೀಯ ರಿಜರ್ವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾಗಿರುವುದು ನಮ್ಮ ಕೆಲಸವನ್ನು ಸುಗಮಗೊಳಿಸಿದೆ.

ಮುಂದಿನ ದಿನಗಳಲ್ಲಿ ಪಟ್ಟಣ ಬ್ಯಾಂಕುಗಳ ಮತ್ತು ಆರ್.ಬಿ.ಐ. ನಡುವೆ ಪರಸ್ಪರ ಸಮಾಲೋಚನೆ, ಸಂವಹನ ಸುಲಭವಾಗಿ ನಡೆಯಲಿ, ನಮ್ಮ ಸಮಸ್ಯೆಗಳನ್ನು ಅವರಲ್ಲಿ ಹೇಳಿಕೊಳ್ಳೋಣ, ಪರಿಹರಿಸಿಕೊಳ್ಳೋಣ.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## 2026ರ ಮಾರ್ಚ್‌ವರೆಗೂ ಜಿಎಸ್‌ಟಿ ಪರಿಹಾರ




**ನವದೆಹಲಿ :** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿ ಸಭೆಗೆ ಕೆಲವು ದಿನ ಬಾಕಿರುವ ಬೆನ್ನಿಗೆ ಜಿಎಸ್‌ಟಿ ಪರಿಹಾರ ಲೆವಿಯನ್ನು 2026ರ ಮಾರ್ಚ್‌ವರೆಗೆ ವಿಸ್ತರಿಸಿ ಕೇಂದ್ರ ಸರ್ಕಾರ ವಿಶೇಷ ಗೆಜೆಟ್ ಅಧಿಸೂಚನೆ ಹೊರಡಿಸಿದೆ.

ಆದರೆ, ಈ ಪರಿಹಾರ ಸೌಲಭ್ಯ ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿದ್ದಲ್ಲ ಎಂದು ಸ್ಪಷ್ಟಪಡಿಸಿದೆ. ಹಿಂದೆ ರಾಜ್ಯಗಳಿಗೆ ನೀಡಲಾದ ಆಶ್ವಾಸನೆಯಂತೆ ಪಡೆಯಲಾದ ಸಾಲಗಳ ಮರುಪಾವತಿಗೆ ಅನುಕೂಲವಾಗಲು ಪರಿಹಾರ ಲೆವಿ ವಿಸ್ತರಣೆ ಒದಗಿಸಲಾಗಿದೆ. ಕಳೆದ ಎರಡು ಹಣಕಾಸು ವರ್ಷಗಳಲ್ಲಿನ ಸಾಲಗಳು ಮತ್ತು ರಾಜ್ಯಗಳಿಗೆ ಪಾವತಿಸಲಾದ ಪರಿಹಾರ ಬಾಕಿ ಸರಿದೂಗಿಸಲು ಈ ವಿಸ್ತರಣೆ ನೀಡಲಾಗಿದೆ ಎಂದು ಹೇಳಿದೆ.

2022ರ ಮೇ ಮತ್ತು ಜೂನ್ ತಿಂಗಳಲ್ಲಿ ರಾಜ್ಯಗಳಿಗೆ ಬಾಕಿಯಿರುವ ಪರಿಹಾರ ಒದಗಿಸಲೂ ಈ ವಿಸ್ತರಣೆ ನೆರವಾಗಲಿದೆ. ಕೆಲವು ನಿರ್ದಿಷ್ಟ ಸರಕು ಮತ್ತು ಸೇವೆಗಳ ಮೇಲಿನ ಜಿಎಸ್‌ಟಿ ಪರಿಹಾರ ಮೇಲಿನ ಲೆವಿಯನ್ನು ಆಗಲೇ 2026ರ ಮಾರ್ಚ್ ವರೆಗೆ ವಿಸ್ತರಿಸಲಾಗಿದೆ.

**ಐದು ವರ್ಷ ಪರಿಹಾರ :** ರಾಜ್ಯ ಮಟ್ಟದ ಬಹುತೇಕ ತೆರಿಗೆಗಳ ವಿಲೀನದ ಕಾರಣ ತೆರಿಗೆ ವರಮಾನ ನಷ್ಟ ಸರಿದೂಗಿಸಲು ಐದು ವರ್ಷಗಳ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರವನ್ನು ಕೇಂದ್ರ ಘೋಷಿಸಿತ್ತು. ಈ ಐದು ವರ್ಷ ಪರಿಹಾರ ಸೆಸ್ ನಿಧಿಯಿಂದ ಹಣ ಒದಗಿಸಲಾಗುತ್ತದೆ ಎಂದು ಕೇಂದ್ರ ಹೇಳಿತ್ತು. ಇದು 2017ರಲ್ಲಿ ಜಿಎಸ್‌ಟಿ ಜಾರಿಯಾದಾಗಿನಿಂದ 2022ರ ಜೂನ್ 30ರವರೆಗೆ ಚಾಲ್ತಿಯಲ್ಲಿ ಇದೆ.

ಕೇಂದ್ರ ಸರ್ಕಾರ 2020-21ರಲ್ಲಿ 1.10 ಲಕ್ಷ ಕೋಟಿ ರೂಪಾಯಿ ಮತ್ತು 2021-22ರಲ್ಲಿ 1.59 ಲಕ್ಷ ಕೋಟಿ ರೂಪಾಯಿ ಸಾಲವನ್ನು ಆರ್‌ಬಿಐನಿಂದ ಪಡೆದಿತ್ತು. ಇದರ ಬಡ್ಡಿ 75 ಸಾವಿರ ಕೋಟಿ ರೂಪಾಯಿಯನ್ನು 2021-22ರಲ್ಲಿ ಮತ್ತು ಪ್ರಸ್ತುತ ಹಣಕಾಸು ವರ್ಷದಲ್ಲಿ 14 ಸಾವಿರ ಕೋಟಿ ರೂಪಾಯಿಯನ್ನು ಕೇಂದ್ರ ಪಾವತಿಸಿದೆ. 2023-24ರಲ್ಲಿ ಸಾಲದ ಮೂಲ ಹಣ ಮರುಪಾವತಿ ಆರಂಭವಾಗಲಿದ್ದು, 2026ರವರೆಗೆ ಇದು ಮುಂದುವರಿಯುತ್ತದೆ.

...1ನೇ ಪುಟದಿಂದ





ಪಟ್ಟಣ ಸಹಕಾರ ಬ್ಯಾಂಕುಗಳು ಏನೆ ಸಮಸ್ಯೆಗಳಿದ್ದರೂ ನಮಗೆ ನೀವು ಇ-ಮೇಲ್ ಸಂದೇಶ ಕಳುಹಿಸಿದರೆ ನಾವು ಅದಕ್ಕೆ ಉತ್ತರ ನೀಡುತ್ತೇವೆ. ಅನೇಕ ಪಟ್ಟಣ ಸಹಕಾರ ಬ್ಯಾಂಕುಗಳು ಎಸ್‌ಎಎಫ್ (SAF)ದಲ್ಲಿ ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಅದೆಷ್ಟು ಬೇಗ ನೀವು ಎಸ್‌ಎಎಫ್ (SAF)ದಿಂದ ಹೊರಗೆ ಬನ್ನಿ. ನೀವು 6 ತಿಂಗಳ ಅವಧಿ ತೆಗೆದುಕೊಳ್ಳಿ. ಅಷ್ಟರಲ್ಲಿ ನೀವು ಎಸ್‌ಎಎಫ್ (SAF)ದಿಂದ ಹೊರಬಂದರೆ ನಿಮ್ಮ ಉಸಾಬರಿಗೆ ನಾವು ಬರುವುದಿಲ್ಲ ಎಂದರು. ಮಹಾಮಂಡಳದ ಮೂಲಕ ನಮ್ಮ ಜೊತೆ ಸಂವಹನ ಮಾಡಿ, ಇಲ್ಲವೇ ನೀವೇ ನಮ್ಮ ಜೊತೆ ಸಂವಹನ ಮಾಡಿ. ನಿಮ್ಮ ಸಮಸ್ಯೆಗಳನ್ನು ನಮ್ಮ ಗಮನಕ್ಕೆ ತನ್ನಿ.

ಮಹಾಮಂಡಳದ ನಿರ್ದೇಶಕರಾದ ಶ್ರೀ ಕೃಷ್ಣ ಎಚ್.ಸಿ ರವರು ಮಾತನಾಡಿ ಆರ್‌ಬಿಐ ಅಂದರೆ ಅವ್ಯಕ್ತವಾದ ಭಯದ ವಾತಾವರಣ ನಮ್ಮೆಲ್ಲರಲ್ಲಿ ಉಂಟಾಗಿದೆ. ಆದರೆ ನಮ್ಮವರೇ ಆದ ಶ್ರೀಮತಿ ಮೀನಾಕ್ಷಿ ಗಡ ರವರು ಇದ್ದಾರೆ. ಸಹಕಾರಿ ಕ್ಷೇತ್ರಕ್ಕೆ ಆತ್ಮೀಯತೆಯ ಬಲವಿದೆ. ನಮ್ಮಲ್ಲಿ ಸಹಕಾರ ಇಲಾಖೆ ಮತ್ತು ಆರ್‌ಬಿಐ ಸಮಸ್ಯೆ ಎಂಬ ಮನೋಭಾವ ಇರುತ್ತದೆ. ಆದ್ದರಿಂದ ನಾವು ನಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದಿಲ್ಲ. ನಾವು ಬಡವರಿಗೆ ಸಹಾಯ ಮಾಡುವುದಕ್ಕೋಸ್ಕರ ನಮ್ಮ ಬ್ಯಾಂಕುಗಳಿವೆ. ಸಣ್ಣ ಬ್ಯಾಂಕುಗಳ ಮೇಲಿನ ಪರಿಸ್ಥಿತಿಯನ್ನು ಅವಲೋಕನ ಮಾಡಿಕೊಳ್ಳಬೇಕು. ಭಾರತೀಯ ರಿಜರ್ವ್ ಬ್ಯಾಂಕಿನವರು ಅನುಭವದ ಕೊರತೆಯಿರುವ ಅಧಿಕಾರಿಗಳನ್ನು ತಪಾಸಣೆಗೆ ಕಳುಹಿಸಿಕೊಡುವುದರಿಂದ ನಮಗೆ ತೊಂದರೆಯಾಗುತ್ತಿದೆ. ಆದ್ದರಿಂದ ಅನುಭವವಿರುವ ಅಧಿಕಾರಿಗಳನ್ನು ಕಳುಹಿಸಿಕೊಡಬೇಕು ಎಂದರು. ಸಣ್ಣ ಪುಟ್ಟ ನಿರ್ದೇಶನ ಅಧಿಕಾರಿಗಳಿಗೆ ನೀಡಬೇಕು. ಆವಾಗ ನಮ್ಮ ಸಹಕಾರಿ ಕ್ಷೇತ್ರ ಸ್ವಲ್ಪ ಉಸಿರಾಡುತ್ತದೆ. ಸರಳ ವ್ಯಕ್ತಿತ್ವ ಹೊಂದಿರುವ ನಮ್ಮ ಕರ್ನಾಟಕದವರೇ ಆದ ಶ್ರೀಮತಿ ಮೀನಾಕ್ಷಿ ಗಡ ರವರು, ಭಾರತೀಯ ರಿಜರ್ವ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾಗಿರುವುದರಿಂದ ನಾವು ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಕಷ್ಟಗಳನ್ನು ಹೇಳಿಕೊಂಡು ಪರಿಹಾರ ಕಂಡುಕೊಳ್ಳಲು ಅನುಕೂಲವಾಗಿದೆ ಎಂದರು.

ಈ ವಿಚಾರ ಸಂಕಿರಣದಲ್ಲಿ Fixed Income Markets in India- Current Trends, Theme & Perspective ಮತ್ತು Investment Management ವಿಷಯದ ಕುರಿತು ಸಂಧ್ಯಾ ಶಶಿ ರವರು ಉಪನ್ಯಾಸ ನೀಡಿದರು. Credit Management ವಿಷಯದ ಕುರಿತು ಭಾರತೀಯ ರಿಜರ್ವ್ ಬ್ಯಾಂಕಿನ ನಿವೃತ್ತ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಶ್ರೀ ಕೆ.ಎಸ್. ಮಹದೇವಸ್ವಾಮಿ ರವರು ಉಪನ್ಯಾಸ ನೀಡಿದರು. Recent RBI Issues ವಿಷಯದ ಕುರಿತು ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ರವರು ಉಪನ್ಯಾಸ ನೀಡಿದರು.

ಈ ಸಮಾರಂಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಕೋಗುಂಡಿ ಬಕ್ಕೇಶಪ್ಪ, ಶ್ರೀ ಹರೀಶ್ ಆಚಾರ, ಶ್ರೀ ರಾಜಕುಮಾರ ಬಾದವಾಡಗಿ, ಶ್ರೀಮತಿ ವೀರಮ್ಮಾ ಪಿ., ಶ್ರೀ ರಾಜಶೇಖರ್ ಎಸ್. ಹಾವಣಗಿ, ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಶರಣಪ್ಪ ಎಸ್. ವಾರದ, ಶ್ರೀ ಎಂ.ಎಂ. ಮೆಟಗುಡ್ಡ, ಶ್ರೀ ಚಂದ್ರಮೌಳಿ ಎಸ್., ರವರುಗಳು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ವಿಚಾರ ಸಂಕಿರಣಕ್ಕೆ ಆಗಮಿಸಿದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿದರು. ಕೊನೆಯಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ವಾಸು. ಹೆಚ್ ರವರು ವಂದನಾರ್ಪಣೆಯನ್ನು ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ 230ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.



ಮಹಾಮಂಡಳವು ಆರ್‌ಐಸಿಎಂ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ದಿನಾಂಕ : 20.06.2022 ರಿಂದ ದಿನಾಂಕ : 24.06.2022 ರವರೆಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಏರ್ಪಡಿಸಿದ್ದ ಐದು ದಿನಗಳ ವಿಶೇಷ ತರಬೇತಿ ಶಿಬಿರದಲ್ಲಿ ಪಾಲ್ಗೊಂಡ ಪ್ರತಿನಿಧಿಗಳು

# ಕೌಶಲ್ಯ ತರಬೇತಿಯಿಂದ ಕುಟುಂಬ ನಿರ್ವಹಣೆ : ಪ್ರಕಾಶ ತಪಶೆಟ್ಟಿ

**ಬಾಗಲಕೋಟೆ :** ಕೌಶಲ್ಯ ತರಬೇತಿಯನ್ನು ಪಡೆದುಕೊಂಡ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರು ಸ್ವಂತ ಉದ್ಯೋಗ ಪ್ರಾರಂಭಿಸಿ, ಆದಾಯ ಮಾಡಿಕೊಳ್ಳುತ್ತಾ ತಮ್ಮ ಕುಟುಂಬ ನಿರ್ವಹಣೆ ಮಾಡುತ್ತಿರುವುದು ಸಂತೋಷದ ವಿಷಯ ಎಂದು ಪ್ರತಿಷ್ಠಿತ ಶ್ರೀ ಬಸವೇಶ್ವರ ಬ್ಯಾಂಕಿನ ಅಧ್ಯಕ್ಷ ಪ್ರಕಾಶ ತಪಶೆಟ್ಟಿಯವರು ನುಡಿದರು. ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕು, ಸಿರಿ ಸಾಂಸ್ಕೃತಿಕ ಮಹಿಳಾ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಾಗಲಕೋಟೆ ಜಿಲ್ಲಾ ವನಿತಾ ಲೋಕದ ಸಹಯೋಗದೊಂದಿಗೆ ದಿನಾಂಕ : 19.06.2022ರಂದು ಬ್ಯಾಂಕಿನ ಸಭಾಂಗಣದಲ್ಲಿ ಹಮ್ಮಿಕೊಂಡ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗಾಗಿ ಉಚಿತ ಕೌಶಲ್ಯ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡುತ್ತ ಕಳೆದ 6–7 ವರ್ಷಗಳಿಂದ ಬ್ಯಾಂಕು ಉಚಿತ ಕೌಶಲ್ಯ ತರಬೇತಿಯನ್ನು ಹಮ್ಮಿಕೊಳ್ಳುತ್ತ ಬಂದಿದ್ದು, ಮಹಿಳೆಯರ ಆರ್ಥಿಕ ವಿಕಸನದಲ್ಲಿ ಬ್ಯಾಂಕು ಸಹಕಾರಿಯಾಗಿದ್ದು ಸಂತೃಪ್ತಿ ತಂದಿದೆ ಎಂದು ಹೇಳಿದರು. 'ವಧು ಅಲಂಕಾರ', 'ಫ್ಯಾಶನ್ ಡಿಸೈನರ', ಮಾಡರ್ನ ಬ್ಯಾಗ್ ಮೇಕಿಂಗ್ ತರಬೇತಿ ಮತ್ತು ಎಚ್.ಡಿ. ಮೇಕಪ್ ತರಬೇತಿ ಇವೆಲ್ಲವೂ ಆದಾಯ ತರುವ ಕಾಮಧೇನುವಾಗಿದೆ ಎಂದು ಹೇಳಿದರು. ಪ್ರತಿ ವರ್ಷ ಇಂಥ ತರಬೇತಿ ಶಿಬಿರಗಳನ್ನು ಆಯೋಜಿಸಲು ಸಿದ್ಧವಾಗಿದೆ ಎಂದರು.

ಅತಿಥಿಗಳಾಗಿ ಆಗಮಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಶ್ರೀಮತಿ ದ್ರಾಕ್ಷಾಯಣಿ ಪಾಟೀಲರು ಕೌಶಲ್ಯ ತರಬೇತಿ ಪೂರ್ಣಗೊಳಿಸಿದ ಮಹಿಳೆಯರಿಗೆ ಸರಕಾರದ ವಿವಿಧ ಸ್ಕೀಮಗಳನ್ನು ವಿವರಿಸಿ ಅರ್ಜಿ ಸಲ್ಲಿಸಿ ಸರಕಾರದಿಂದ ಸಹಾಯಧನ ಪಡೆಯಬಹುದು ಎಂದು ತಿಳಿಸಿದರು. ಮಹಿಳೆಯರು ಸ್ವಸಹಾಯ ಗುಂಪು ಮಾಡಿಕೊಂಡು, ನಗರಸಭೆ ಹಾಗೂ ನಮ್ಮ ಆಫೀಸಿನಿಂದ ಧನ ಸಹಾಯ ಪಡೆದುಕೊಳ್ಳಬಹುದು ಎಂದು ಹೇಳಿದರು. ತರಬೇತಿದಾರರಾದ ಶ್ರೀಮತಿ ರಾಜೇಶ್ವರಿ ಬೋನಗೇರಿಯವರು ಮಾತನಾಡಿದರು.



ಶ್ರೀಮತಿ ಶಿಲ್ಪಾ ಯರಾಶಿ ಸ್ವಾಗತಿಸಿದರು. ಶ್ರೀಮತಿ ಜಯಮ್ಮ ಅಬ್ಬುಲಪುರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯ ಮೇಲೆ ಶ್ರೀಮತಿ ವಿಜಯಲಕ್ಷ್ಮೀ ದಿಡ್ಡಿಬಾಗಿಲ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವ್ಹಿ.ಸಿ. ಕೇಮಾಳಿ ಮುಖ್ಯಕಾರ್ಯನಿರ್ವಹಣಾಧಿಕಾರಿ, ಅಧಿಕಾರಿಗಳಾದ ಪಿ.ಎನ್. ಹಳ್ಳಿಕೇರಿ, ಎಮ್.ಎಸ್. ಗುಡಗುಂಟಿ, ಶಾಖಾ ವ್ಯವಸ್ಥಾಪಕಿಯರಾದ ಮಿಸ್ ಎಸ್. ಎಚ್. ಕುರ್ತಕೋಟಿ, ಶ್ರೀಮತಿ ಜ್ಯೋತಿ ನಾವಲಗಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶ್ರೀಮತಿ ಅರ್ಚನಾ ಗಡ್ಡಿಮಠ ಪ್ರಾರ್ಥಿಸಿದ ಸಮಾರಂಭದಲ್ಲಿ ಕುಮಾರಿ ಮಧುಶ್ರೀ ನಿರೂಪಿಸಿದರು.

## ಮಹಾಮಂಡಳದ ದಾವಾ ಪಂಚಾಯ್ತಿ ನ್ಯಾಯಾಲಯ ಮತ್ತು ಅಮಲ್ಜಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು | ದಾವಾ ಪಂಚಾಯ್ತಿ ನ್ಯಾಯಾಲಯ, ಪ್ರಾಂತೀಯ ಕಛೇರಿ, ಹುಬ್ಬಳ್ಳಿ |
|---|---|
| ಶ್ರೀ ರವೀಂದ್ರ ಜಿ.ಎಂ.<br>ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441),<br>ದೂರವಾಣಿ : 080–22220739 | ಶ್ರೀ ಕಲ್ಲಪ್ಪ ಓಬಣ್ಣಗೋಳ<br>ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441),<br>ದೂರವಾಣಿ : 0836–2332317 |
| **ಅಮಲ್ಜಾರಿ ಕಛೇರಿ, ಬೆಂಗಳೂರು** | **ಅಮಲ್ಜಾರಿ ಕಛೇರಿ, ಹುಬ್ಬಳ್ಳಿ** |
| ಶ್ರೀ ಬಿ.ಹೆಚ್. ಬಾಬುರೆಡ್ಡಿ<br>ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು.<br>ದೂರವಾಣಿ : 080–22279574 / 22233662 | ಶ್ರೀ ಎಸ್.ಕೆ. ಸಜ್ಜನ<br>ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು.<br>ದೂರವಾಣಿ : 0836–2332317. |

ತಮ್ಮ ಬ್ಯಾಂಕಿನ ದಾವಾ & ಅಮಲ್ಜಾರಿ ಪ್ರಕರಣಗಳನ್ನು ದಾಖಲಿಸಲು ಆಯಾ ವಿಭಾಗದ ಕಛೇರಿಗಳನ್ನು ಸಂಪರ್ಕಿಸಿ, ದಾವಾ ಪ್ರಕರಣಗಳನ್ನು ಮತ್ತು ಅಮಲ್ಜಾರಿ ಪ್ರಕರಣಗಳನ್ನು ದಾಖಲಿಸಿ, ಇತ್ಯರ್ಥಪಡಿಸಿಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ವಿನಂತಿಸಿರುತ್ತಾರೆ.

# ಶೇ.50ರಷ್ಟು ಆರ್ಥಿಕ ಹಿಂಜರಿತ ಸಾಧ್ಯತೆ

**ಬೆಂಗಳೂರು :** ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಶುರುವಾಗುವ ಸಾಧ್ಯತೆಯು ಶೇ.50ರಷ್ಟು ಇದೆ ಎಂದು ಸಿಟಿಗ್ರೂಪ್ ಅಂದಾಜು ಮಾಡಿದೆ. ಜಗತ್ತಿನ ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರ ಪ್ರಮಾಣ ಕಡಿಮೆ ಮಾಡಲು ಬಡ್ಡಿ ದರ ಜಾಸ್ತಿ ಮಾಡುತ್ತಿರುವ ಸಂದರ್ಭದಲ್ಲಿ ಸಿಟಿಗ್ರೂಪ್ ಈ ಅಂದಾಜು ಮಾಡಿದೆ.



ಹಿಂಜರಿತದ ಅಪಾಯವು ಹೆಚ್ಚೆಚ್ಚು ಅನುಭವಕ್ಕೆ ಬರುತ್ತಿದೆ ಎಂದು ಸಿಟಿಗ್ರೂಪ್‌ನ ವಿಶ್ಲೇಷಕರು ಹೇಳಿದ್ದಾರೆ. ಹಣದುಬ್ಬರ ಕಡಿಮೆ ಮಾಡುವಾಗ ಬೆಳವಣಿಗೆಯ ಪ್ರಮಾಣವೂ ತಗ್ಗುತ್ತದೆ ಎಂಬುದನ್ನು ಹಿಂದಿನ ಅನುಭವ ಹೇಳುತ್ತದೆ. ಆರ್ಥಿಕ ಹಿಂಜರಿತ ಉಂಟಾಗುವ ಸಾಧ್ಯತೆಯು ಶೇ.50ರ ಸಮೀಪ ಬಂದಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಸೇರಿದಂತೆ ಹಲವು ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿ ದರವನ್ನು ತೀವ್ರವಾಗಿ ಹೆಚ್ಚಳ ಮಾಡಿವೆ. 'ನಾವು ಆರ್ಥಿಕ ಹಿಂಜರಿತಕ್ಕೆ ಇಂಬು ಕೊಡುವ ಯತ್ನ ಮಾಡುತ್ತಿಲ್ಲ. ಬದಲಿಗೆ, ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಬದ್ಧತೆಯನ್ನು ಹೊಂದಿದ್ದೇವೆ ಎಂದು ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೋವೆಲ್ ಬುಧವಾರ ಹೇಳಿದ್ದಾರೆ. ಅಲ್ಲದೆ, ಆರ್ಥಿಕ ಹಿಂಜರಿತದ ಸಾಧ್ಯತೆ ಖಂಡಿತವಾಗಿಯೂ ಇದೆ ಎಂದು ಕೂಡ ಪೋವೆಲ್ ಹೇಳಿದ್ದಾರೆ.

ಜಾಗತಿಕ ಅರ್ಥ ವ್ಯವಸ್ಥೆಯು ಈಗಿನ ಹಂತದಲ್ಲಿ ಮಂದಗತಿಗೆ ತಿರುಗುವ ಹಲವು ಸೂಚನೆಗಳನ್ನು ನೀಡುತ್ತಿದೆ. ಪೂರೈಕೆ ವ್ಯವಸ್ಥೆಗೆ ಬಿದ್ದ ಏಟುಗಳು ಮಾತ್ರವೇ ಅಲ್ಲದೆ, ಕೇಂದ್ರೀಯ ಬ್ಯಾಂಕ್‌ಗಳ ಹಣಕಾಸು ನೀತಿಯನ್ನು ಬಿಗಿಗೊಳಿಸಿದ್ದು, ಹೆಚ್ಚಿನ ಹಣದುಬ್ಬರವು ಗ್ರಾಹಕರ ಮೇಲೆ ಬೀರುವ ಪರಿಣಾಮಗಳಿಂದಾಗಿಯೂ ಹೀಗಾಗುತ್ತಿದೆ ಎಂದು ಸಿಟಿಗ್ರೂಪ್ ಹೇಳಿದೆ.

ಬ್ರಿಟನ್ನಿನ ಬಹುರಾಷ್ಟ್ರೀಯ ಬ್ಯಾಂಕ್ ಆಗಿರುವ ಬಾರ್ಕ್ಲೇಸ್ ಕೂಡ, ಅಭಿವೃದ್ಧಿ ಹೊಂದಿರುವ ಅರ್ಥ ವ್ಯವಸ್ಥೆಗಳ ಬೆಳವಣಿಗೆ ದರವು 2023ರಲ್ಲಿ ಶೇ.1ಕ್ಕೆ ಇಳಿಕೆ ಆಗಲಿದೆ ಎಂದು ಅಂದಾಜು ಮಾಡಿದೆ.

ಪ್ರಸಕ್ತ ಹಣಕಾಸು ವರ್ಷದ ನಾಲ್ಕನೆಯ ತ್ರೈಮಾಸಿಕದಿಂದ ಯುರೊ ಪ್ರದೇಶವು (ಯುರೊ'ವನ್ನು ಕರೆನ್ಸಿಯಾಗಿ ಒಪ್ಪಿಕೊಂಡಿರುವ ದೇಶಗಳು) ಆರ್ಥಿಕ ಹಿಂಜರಿತಕ್ಕೆ ಜಾರುವ ಸಾಧ್ಯತೆ ಇದೆ ಎಂದು ಹೇಳಿದೆ.

2023ರಲ್ಲಿ ಅಮೆರಿಕದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಶೇ.1.1ಕ್ಕೆ ಕುಸಿಯಲಿದೆ ಎಂದು ಬಾರ್ಕ್ಲೇಸ್ ಹೇಳಿದೆ. ಅಮೆರಿಕದ ಬೆಳವಣಿಗೆ ದರ 2021ರಲ್ಲಿ ಶೇ.5.7ರಷ್ಟಿತ್ತು.

## ಡಾಲರ್ ಎದುರು ಮತ್ತೆ ದಾಖಲೆ ಕುಸಿತ ಕಂಡ ರೂಪಾಯಿ ಮೌಲ್ಯ

**ಮುಂಬೈ :** ಹೂಡಿಕೆದಾರರ ನೀರಸ ಪ್ರತಿಕ್ರಿಯೆ ಹಿನ್ನಲೆಯಲ್ಲಿ ಬುಧವಾರವೂ ಕೂಡ ರೂಪಾಯಿ ಮೌಲ್ಯ ಕುಸಿತಗೊಂಡಿದ್ದು, ಡಾಲರ್ ಎದುರು ದಾಖಲೆ ಮಟ್ಟದ ಕುಸಿತ ಕಂಡಿದೆ. ಡಾಲರ್ ಎದುರು ರೂಪಾಯಿ ಮೌಲ್ಯ 27 ಪೈಸೆ ಕುಸಿದು ದಾಖಲೆಯ 78.40ಕ್ಕೆ ತಲುಪಿದೆ. ವಿದೇಶಿ ನಿಧಿಯ ಹೊರಹರಿವು ಮತ್ತು ದೇಶೀಯ ಷೇರುಗಳಲ್ಲಿನ ನಷ್ಟದಿಂದಾಗಿ ಡಾಲರ್ ವಿರುದ್ಧ ರೂಪಾಯಿ ಮೌಲ್ಯ 27 ಪೈಸೆಗಳಷ್ಟು ಕುಸಿದು 78.40 ದಾಖಲೆಯ ಕನಿಷ್ಠ ಮಟ್ಟಕ್ಕೆ ತಲುಪಿದೆ.

ಸಾಗರೋತ್ತರದಲ್ಲಿ ಬಲವಾದ ಗ್ರೀನ್‌ಬ್ಯಾಕ್ ಕೂಡ ರೂಪಾಯಿ ಮೌಲ್ಯ ಕುಸಿತದ ಮೇಲೆ ಪರಿಣಾಮ ಬೀರಿದೆ. ಆದಾಗ್ಯೂ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಕಡಿಮೆಯಾಗುತ್ತಿರುವುದು ರೂಪಾಯಿಯ ನಷ್ಟ ಪ್ರಮಾಣವನ್ನು ನಿರ್ಬಂಧಿಸಿದೆ ಎಂದು ಫಾರೆಕ್ಸ್ ವ್ಯಾಪಾರಿಗಳು ತಿಳಿಸಿದ್ದಾರೆ. ಇಂಟರ್ ಬ್ಯಾಂಕ್ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ, ಸ್ಥಳೀಯ ಕರೆನ್ಸಿಯು ಗ್ರೀನ್ ಬ್ಯಾಕ್ ವಿರುದ್ಧ 78.13 ರೂನೊಂದಿಗೆ ವಹಿವಾಟು ಆರಂಭವಾಯಿತು. 78.13ರ ಇಂಟ್ರಾ-ಡೇ ಗರಿಷ್ಠ ಮತ್ತು 78.40ರ ಕನಿಷ್ಠಕ್ಕೆ ಮಾರುಕಟ್ಟೆ ಸಾಕ್ಷಿಯಾಯಿತು. ದೇಶೀಯ ಘಟಕವು ಅಂತಿಮವಾಗಿ 78.40 ರ ದಾಖಲೆಯ ಕನಿಷ್ಠ ಮಟ್ಟದಲ್ಲಿ ವಹಿವಾಟು ಕೊನೆಗೊಳಿಸಿತು. ಇದು ಅದರ ಹಿಂದಿನ ಮುಕ್ತಾಯಕ್ಕಿಂತ 27 ಪೈಸೆ ಕಡಿಮೆಯಾಗಿದೆ. ಹಿಂದಿನ ಸೆಷನ್‌ನಲ್ಲಿ, ಡಾಲರ್ ಎದುರು ರೂಪಾಯಿ 78.13 ರಷ್ಟಿತ್ತು.

## ಚಾಲ್ತಿ ಖಾತೆ ಕೊರತೆ ಶೇ.1.2ರಷ್ಟು

**ಮುಂಬೈ :** ದೇಶದಲ್ಲಿ ಚಾಲ್ತಿ ಖಾತೆ ಕೊರತೆಯು (ಸಿಎಡಿ) 2021-22ರಲ್ಲಿ ಒಟ್ಟು ಜಿಡಿಪಿಯ ಶೇ.1.2ರಷ್ಟು ಆಗಿದೆ ಎಂದು ಆರ್‌ಬಿಐ ಹೇಳಿದೆ. 2020-21ರಲ್ಲಿ ಚಾಲ್ತಿ ಖಾತೆ ಮಿಗತೆ ಶೇ.0.9ರಷ್ಟು ಇತ್ತು. ಚಾಲ್ತಿ ಖಾತೆ ಕೊರತೆ ಸೃಷ್ಟಿಯಾಗಿರುವುದಕ್ಕೆ ಮುಖ್ಯ ಕಾರಣ ವ್ಯಾಪಾರ ಕೊರತೆ ಜಾಸ್ತಿ ಆಗಿರುವುದು ಎಂದು ಆರ್‌ಬಿಐ ಹೇಳಿದೆ. ಈ ವರ್ಷದ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಸಿಎಡಿಯು ಜಿಡಿಪಿಯ ಶೇ.1.5ಕ್ಕೆ ತಗ್ಗಿದೆ. ಇದು ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಶೇ.2.6ರಷ್ಟು ಇತ್ತು.

## ಹಣದುಬ್ಬರ : ಆರ್‌ಬಿಐ ಗವರ್ನರ್ ಕಳವಳ

**ಮುಂಬೈ :** ಹಣದುಬ್ಬರ ದರವು ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿಯುವುದು ಅರ್ಥ ವ್ಯವಸ್ಥೆಯ ಪಾಲಿಗೆ ಕಳವಳ ಮೂಡಿಸುವ ಸಂಗತಿ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ರೆಪೊ ದರವನ್ನು ಶೇ.0.50ರಷ್ಟು ಹೆಚ್ಚಿಸುವ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ಅವರು ಈ ಮಾತು ಆಡಿದ್ದಾರೆ. ಎಂಪಿಸಿ ಸಭೆಯ ವಿವರಗಳನ್ನು ಆರ್‌ಬಿಐ ಬುಧವಾರ ಪ್ರಕಟಿಸಿದೆ. ಹಣದುಬ್ಬರ ಇದ್ದರೂ ಆರ್ಥಿಕ ಚಟುವಟಿಕೆಗಳ ಪುನಶ್ಚೇತನವು ಆಗುತ್ತಿದೆ ಎಂದು ದಾಸ್ ಅವರು ಸಭೆಯಲ್ಲಿ ಹೇಳಿದ್ದಾರೆ.

# ಜುಲೈ 1 ರಿಂದ ಹೊಸ ಡೆಬಿಟ್ ಕಾರ್ಡ್ ನಿಯಮ : ವಿವರಗಳು ಇಲ್ಲಿವೆ

**ನವದೆಹಲಿ :** ಎಲ್ಲಾ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್ ಹೊಂದಿರುವವರಿಗೆ ಆರ್‌ಬಿಐ ಸಿಹಿ ಸುದ್ದಿ ನೀಡಿದೆ. ಜುಲೈ 1, 2022 ರಿಂದ ಆನ್‌ಲೈನ್ ವ್ಯಾಪಾರಿಗಳು ಗ್ರಾಹಕರ ಕಾರ್ಡ್ ಡೇಟಾ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಕಳೆದ ವರ್ಷ ಗ್ರಾಹಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಟೋಕನೈಸೇಶನ್ ನಿಯಮಗಳನ್ನು ಹೊರಡಿಸಿತ್ತು. ನಿಯಮಗಳ ಅಡಿಯಲ್ಲಿ, ವ್ಯಾಪಾರಿಗಳು ತಮ್ಮ ಸರ್ವರ್‌ಗಳಲ್ಲಿ ಗ್ರಾಹಕರ ಕಾರ್ಡ್ ಡೇಟಾ ಸಂಗ್ರಹಿಸುವುದನ್ನು ನಿರ್ಬಂಧಿಸಲಾಗಿದೆ.

ಈ ಕಾರ್ಡ್ ಟೋಕನೈಸೇಶನ್ ನಿಯಮಗಳು ಜುಲೈ 1, 2022 ರಿಂದ ಜಾರಿಗೆ ಬರಲಿದೆ. ಆರ್‌ಬಿಐ ದೇಶೀಯ ಆನ್‌ಲೈನ್ ಖರೀದಿಗಳಿಗೆ ಕಾರ್ಡ್ ಆನ್‌ಫೈಲ್ ಟೋಕನ್‌ಗಳನ್ನು ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಿದೆ. ದೇಶದಾದ್ಯಂತ ಕಾರ್ಡ್ ಟೋಕನ್‌ಗಳನ್ನು ಅಳವಡಿಸಿಕೊಳ್ಳುವ ಗಡುವನ್ನು ಜನವರಿ 1, 2022 ರಿಂದ ಜುಲೈ 1, 2022 ರವರೆಗೆ ಆರು ತಿಂಗಳವರೆಗೆ ವಿಸ್ತರಿಸಲಾಗಿದೆ. ಗ್ರಾಹಕರು ಸುರಕ್ಷಿತ ವಹಿವಾಟುಗಳನ್ನು ಮಾಡಲು ಸಹಾಯ ಮಾಡಲು ಎನ್‌ಕ್ರಿಪ್ಟ್ ಮಾಡಿದ "ಟೋಕನ್" ಆಗಿ ಸಂಗ್ರಹಿಸಲಾಗುತ್ತದೆ. ಈ ಟೋಕನ್‌ಗಳು ಗ್ರಾಹಕರ ವಿವರಗಳನ್ನು ಬಹಿರಂಗಪಡಿಸದೆ ಪಾವತಿ ಮಾಡಲು ಅವಕಾಶ ನೀಡುತ್ತದೆ. ಆದ್ದರಿಂದ ಜುಲೈ 1, 2022 ರಿಂದ, ವ್ಯಾಪಾರಿಗಳು ತಮ್ಮ ದಾಖಲೆಗಳಿಂದ ಗ್ರಾಹಕರ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಡೇಟಾವನ್ನು ಅಳಿಸಬೇಕಾಗುತ್ತದೆ.

**ಟೋಕನೈಸೇಶನ್ ನಿಯಮ ಏನು? :** ಅಮೆಜಾನ್, ಸ್ವಿಗ್ಗಿಯಂತಹ ಆನ್‌ಲೈನ್ ತಾಣಗಳಲ್ಲಿ ಖರೀದಿ ಮಾಡಿದ ಬಳಿಕ ಪಾವತಿ ಮಾಡಲು ಡೆಬಿಟ್‌ಅಥವಾ ಕ್ರೆಡಿಟ್‌ಕಾರ್ಡ್ ಉಪಯೋಗಿಸಿದರೆ, ಅದರಲ್ಲಿ 'ಸೇವ್ ದಿಸ್ ಕಾರ್ಡ್' ಎನ್ನುವ ಆಯ್ಕೆ ನೀಡಲಾಗುತ್ತಿತ್ತು, ಇದಕ್ಕೆ ನೀವು ಒಪ್ಪಿಗೆ ಕೊಟ್ಟರೆ ನಿಮ್ಮ ಕಾರ್ಡ್ ಮಾಹಿತಿ ಆಪ್‌ನಲ್ಲಿ ಸೇವ್ ಆಗುತ್ತದೆ.

ಭವಿಷ್ಯದಲ್ಲಿ ಅದೇ ತಾಣದಲ್ಲಿ ಖರೀದಿಗೆ ಮತ್ತೊಮ್ಮೆ ಕಾರ್ಡ್ ಮಾಹಿತಿಗಳನ್ನು ನಮೂದಿಸುವ ಅಗತ್ಯ ಇರಲಿಲ್ಲ. ಈಗಾಗಲೇ ಸೇವ್ ಆಗಿರುವ ಕಾರ್ಡ್ ಮಾಹಿತಿಗೆ ಕ್ಲಿಕ್ ಕೊಟ್ಟು, ಸಿವಿವಿ ನಮೂದಿಸಿ ಬಳಿಕ, ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ಹಾಕಿದರೆ ಪಾವತಿ ಆಗುತ್ತಿತ್ತು.







**ಗ್ರಾಹಕರ ಮಾಹಿತಿ ಭದ್ರತೆ :** ಆದರೆ ಆರ್‌ಬಿಐನ ಹೊಸ ನಿಯಮದನ್ವಯ ಗ್ರಾಹಕರ ಕಾರ್ಡ್‌ಮಾಹಿತಿಗಳನ್ನು ಸಂಗ್ರಹಿಸಿಡಲು ಕಂಪನಿಗಳಿಗೆ ಅವಕಾಶ ಇರುವುದಿಲ್ಲ. ಇದರನ್ವಯ ಪ್ರತೀ ಬಾರಿ ವಹಿವಾಟು ಮಾಡುವಾಗ ಕಾರ್ಡ್ ಮಾಹಿತಿಗಳನ್ನು ಹೊಸದಾಗಿ ನಮೂದು ಮಾಡಬೇಕು. ಪದೇ ಪದೇ ಹೊಸದಾಗಿ ಕಾರ್ಡ್‌ಮಾಹಿತಿ ನಮೂದಿಸುವ ಬದಲು, ಪ್ರತೀ ಕಾರ್ಡ್‌ಗೆ ಟೋಕನ್ ಮಾದರಿಯ ಸಂಖ್ಯೆ ಕೊಡುವುದೇ ಆರ್‌ಬಿಐನ ಟೋಕನೈಸೇಶನ್ ನಿಯಮ. ಗ್ರಾಹಕರ ಹಣಕಾಸು ಮಾಹಿತಿ ಕಂಪನಿಗಳಿಗೆ ಸಿಗದಂತೆ ಮಾಡಲು ಆರ್‌ಬಿಐ ಈ ನೂತನ ಯೋಜನೆ ತಂದಿದೆ.

**ಕಾರ್ಡ್ ಟೋಕನೈಸೇಶನ್ ವ್ಯವಸ್ಥೆ ಕಡ್ಡಾಯವಲ್ಲ :** ಕಾರ್ಡ್ ಟೋಕನೈಸೇಶನ್ ವ್ಯವಸ್ಥೆ ಕಡ್ಡಾಯವಲ್ಲ. ಆದ್ದರಿಂದ ಗ್ರಾಹಕರು ತಮ್ಮ ಕಾರ್ಡ್‌ನ ಟೋಕನೈಸೇಶನ್‌ಗೆ ಒಪ್ಪಿಗೆ ನೀಡದಿದ್ದರೆ, ಗ್ರಾಹಕರು ಆನ್‌ಲೈನ್ ಪಾವತಿ ಮಾಡುವಾಗ ಪ್ರತಿ ಬಾರಿ ಕಾರ್ಡ್ ಪರಿಶೀಲನೆ ಮೌಲ್ಯ ಅಥವಾ ಸಿವಿಸಿ ನಮೂದಿಸುವ ಬದಲು ಹೆಸರು, ಕಾರ್ಡ್ ಸಂಖ್ಯೆ ಮತ್ತು ಕಾರ್ಡ್ ಮಾನ್ಯತೆಯಂತಹ ಎಲ್ಲಾ ಕಾರ್ಡ್ ವಿವರಗಳನ್ನು ನಮೂದಿಸಬೇಕಾಗುತ್ತದೆ.

ಅದೇ ಸಮಯದಲ್ಲಿ, ಗ್ರಾಹಕರು ಕಾರ್ಡ್ ಟೋಕನೈಸೇಶನ್‌ಗೆ ಸಮ್ಮತಿಸಿದರೆ, ಅವನು ಅಥವಾ ಅವಳು ವಹಿವಾಟು ಮಾಡುವಾಗ ಸಿವಿವಿ ಅಥವಾ ಒಂದು ಬಾರಿ ಪಾಸ್‌ವರ್ಡ್ ವಿವರಗಳನ್ನು ಮಾತ್ರ ನಮೂದಿಸಬೇಕಾಗುತ್ತದೆ.

**ಟೋಕನೈಸೇಶನ್ ವ್ಯವಸ್ಥೆ ಸಂಪೂರ್ಣ ಉಚಿತ :** ಟೋಕನೈಸೇಶನ್ ವ್ಯವಸ್ಥೆಯು ಸಂಪೂರ್ಣವಾಗಿ ಉಚಿತವಾಗಿದೆ ಮತ್ತು ಇದು ಒಬ್ಬರ ಕಾರ್ಡ್‌ನ ಡೇಟಾವನ್ನು ಸುರಕ್ಷಿತವಾಗಿರಿಸುವಾಗ ಸುಗಮ ಪಾವತಿ ಅನುಭವವನ್ನು ಒದಗಿಸುತ್ತದೆ. ಅಲ್ಲದೆ ಟೋಕನೈಸೇಶನ್ ದೇಶೀಯ ಆನ್‌ಲೈನ್ ವಹಿವಾಟುಗಳಿಗೆ ಮಾತ್ರ ಅನ್ವಯಿಸುತ್ತದೆ.

ಆರ್‌ಬಿಐ ಪ್ರಕಾರ, ಟೋಕನೈಸೇಶನ್ ವಿನಂತಿಯ ನೋಂದಣಿಯನ್ನು ಹೆಚ್ಚುವರಿ ಅಂಶದ ದೃಢೀಕರಣದ ಮೂಲಕ ಸ್ಪಷ್ಟ ಗ್ರಾಹಕ ಒಪ್ಪಿಗೆಯೊಂದಿಗೆ ಮಾತ್ರ ಮಾಡಲಾಗುತ್ತದೆ ಮತ್ತು ಚೆಕ್ ಬಾಕ್ಸ್, ರೇಡಿಯೋ ಬಟನ್ ಇತ್ಯಾದಿಗಳ ಬಲವಂತದ ಅಥವಾ ಡೀಫಾಲ್ಟ್ ಅಥವಾ ಸ್ವಯಂಚಾಲಿತ ಆಯ್ಕೆಯ ಮೂಲಕ ಮಾಡಲು ಅವಕಾಶ ಇಲ್ಲ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಪಟ್ಟಣ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕರು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಬ್ಯಾಂಕಿನಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರು / ನಿರ್ದೇಶಕರುಗಳು ತೆಗೆದುಕೊಳ್ಳುವ ತಪ್ಪು ನಿರ್ಧಾರಗಳ ಬಗ್ಗೆ ಬ್ಯಾಂಕಿಗೆ ಉಂಟಾಗಬಹುದಾದ ನಷ್ಟಗಳ ಕುರಿತು ಸಹಕಾರ ಇಲಾಖೆಗೆ ಅಥವಾ ಭಾರತೀಯ ರಿಜರ್ವ್ ಬ್ಯಾಂಕಿಗೆ ಗೌಪ್ಯವಾಗಿ ಮಾಹಿತಿಯನ್ನು ವ್ಯವಹರಿಸಬಹುದೇ? ವ್ಯವಹರಿಸಬಹುದಾದಲ್ಲಿ ಯಾವ ಕಾಯ್ದೆ ನಿಯಮಗಳಡಿಯಲ್ಲಿ ಪತ್ರ ವ್ಯವಹರಿಸಬಹುದು ಇದರ ಮಾನದಂಡನಗಳ ಬಗ್ಗೆ ದಯವಿಟ್ಟು ತುರ್ತಾಗಿ ತಾವು ಸಲಹೆ ನೀಡಬೇಕಾಗಿ ತಮ್ಮಲ್ಲಿ ಕೋರಿ ಕೊಳ್ಳುತ್ತೇನೆ.**

**– ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಸಹಕಾರ ಸಂಘಗಳ ಕಾಯ್ದೆ ನಿಯಮ ಅಥವಾ ಬೈಲಾಗಳನ್ನು ಉಲ್ಲಂಘಿಸಿ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ಧಾರಗಳನ್ನು ಕೈಗೊಂಡರೆ ಅದನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಕಾರ್ಯಗತಗೊಳಿಸಬಾರದು ಮತ್ತು ಅಂತಹ ನಿರ್ಣಯಗಳನ್ನು ರಿಜಿಸ್ಟ್ರಾರರ ಗಮನಕ್ಕೆ ತರಬೇಕು ಎಂದು ನಿಯಮ 14–ಎಎಮ್(17)ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

**02. ನಮ್ಮ ಪ್ರದೇಶದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆ ನಮ್ಮ ಬ್ಯಾಂಕಿನಿಂದ ಸಾಲದ ರೂಪದಲ್ಲಿ ಅಥವಾ ಠೇವಣಿ ರೂಪದಲ್ಲಿ ಆರ್ಥಿಕ ಸಹಾಯ ಕೋರಿದೆ. ಆ ಕಾರ್ಖಾನೆಯ ಕೋರಿಕೆಯನ್ನು ಇಡೇರಿಸಬಹುದೇ?**

**– ಸಹಕಾರಿ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ :** ಸಹಕಾರ ಸಂಘಗಳಿಗೆ ಅನ್ವಯಿಸುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 5(ಸಿಸಿv) (iii)ರಲ್ಲಿ ಹೇಳಿರುವಂತೆ ಪಟ್ಟಣ ಸಹಕಾರ ಬ್ಯಾಂಕುಗಳು ಬೈಲಾದಲ್ಲಿ ಯಾವುದೇ ಸಹಕಾರ ಸಂಘಕ್ಕೆ ಸದಸ್ಯತ್ವ ನೀಡಬಾರದು ಎಂದು ಸ್ಪಷ್ಟವಾಗಿ ಬರೆದಿರಬೇಕು. ಪಟ್ಟಣ ಸಹಕಾರ ಬ್ಯಾಂಕುಗಳು ಸದಸ್ಯರಲ್ಲದವರಿಗೆ ಸಾಲ ನೀಡಬಾರದು. ಸಹಕಾರ ಸಕ್ಕರೆ ಕಾರ್ಖಾನೆಗೆ ಸದಸ್ಯತ್ವ ನೀಡಲು ಸಾಧ್ಯವಿಲ್ಲದಿರುವುದರಿಂದ ಕಾರ್ಖಾನೆಗೆ ಸಾಲ ನೀಡುವಂತಿಲ್ಲ. ಅದಲ್ಲದೆ, ಪಟ್ಟಣ ಸಹಕಾರ ಬ್ಯಾಂಕುಗಳು ವಾಣಿಜ್ಯ ಬ್ಯಾಂಕು ಪ್ರಾದೇಶಿಕ ಸಹಕಾರಿ ಬ್ಯಾಂಕು, ಷೆಡ್ಯೂಲ್ಡ್ ಪಟ್ಟಣ ಸಹಕಾರ ಬ್ಯಾಂಕು, ಸ್ಮಾಲ್ ಫೈನಾನ್ಸ್ ಬ್ಯಾಂಕು, ಡಿ.ಸಿ.ಸಿ. ಬ್ಯಾಂಕು ಮತ್ತು ಅಪೆಕ್ಸ ಬ್ಯಾಂಕುಗಳಲ್ಲಿ ಮಾತ್ರ ಠೇವಣಿ ಇಡಬಹುದು. ಸಕ್ಕರೆ ಕಾರ್ಖಾನೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಠೇವಣಿ ಹಾಕುವಂತಿಲ್ಲ. ಹಾಗಾಗಿ ಸಕ್ಕರೆ ಕಾರ್ಖಾನೆಯ ಕೋರಿಕೆಯನ್ನು ಇಡೇರಿಸಲು ಸಾಧ್ಯವಿಲ್ಲ.

## ಡಿಸೆಂಬರ್ ನಂತರ ಹಣದುಬ್ಬರ ಇಳಿಕೆ : ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ



**ನವದೆಹಲಿ :** ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳಲ್ಲಿ ಶೇ.6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಡೆಪ್ಯುಟಿ ಗವರ್ನರ್ ಮೈಕೆಲ್ ಪಾತ್ರಾ ಹೇಳಿದ್ದಾರೆ. ಹಣದುಬ್ಬರವು ಗರಿಷ್ಠ ಮಟ್ಟವನ್ನು ತಲುಪಿರುವ ಸೂಚನೆಗಳು ಇವೆ ಎಂದೂ ಪಾತ್ರಾ ಅವರು ಶುಕ್ರವಾರ ಹೇಳಿದ್ದಾರೆ.

ಹಣದುಬ್ಬರ ಪ್ರಮಾಣವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿದ್ದರೆ, ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಹಣದುಬ್ಬರವನ್ನು ನಿಯಂತ್ರಿಸಲು ಏಕೆ ಆಗಲಿಲ್ಲ ಎಂಬುದನ್ನು ಆರ್‌ಬಿಐ ವರದಿಯಲ್ಲಿ ಹೇಳಬೇಕಾಗುತ್ತದೆ. ಹಣದುಬ್ಬರವು ಸತತ ಮೂರು ತ್ರೈಮಾಸಿಕಗಳವರೆಗೆ ಗರಿಷ್ಠ ಮಿತಿಗಿಂತ ಹೆಚ್ಚಿರುವ ಸಾಧ್ಯತೆ ಜಾಸ್ತಿ ಇದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಏಪ್ರಿಲ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ.7.79ಕ್ಕೆ ತಲುಪಿತ್ತು. ಮೇ ತಿಂಗಳಿನಲ್ಲಿ ಅದು ತುಸು ಕಡಿಮೆ ಆಯಿತು. ಸತತ ಐದು ತಿಂಗಳುಗಳಿಂದ ಹಣದುಬ್ಬರವು ಶೇ.6ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ. ಜಾಗತಿಕ ಮಟ್ಟದಲ್ಲಿ ಹಣದ ಹರಿವಿನ ಮೇಲೆ ಕೈಗೊಂಡಿರುವ ಬಿಗಿ ಕ್ರಮಗಳಿಗೆ ಹೋಲಿಸಿದರೆ, ಆರ್‌ಬಿಐ ಇನ್ನು ಮುಂದೆ ಕೈಗೊಳ್ಳಲಿರುವ ಕ್ರಮಗಳು ಹೆಚ್ಚು ಸೌಮ್ಯವಾಗಿರಲಿವೆ ಎಂದು ಪಾತ್ರಾ ಅವರು ಆಶಾಭಾವ ವ್ಯಕ್ತಪಡಿಸಿದ್ದಾರೆ.

ಹಣದುಬ್ಬರ ಪ್ರಮಾಣವು ಶೇ.6ಕ್ಕಿಂತ ಜಾಸ್ತಿ ಆದಾಗ ಆರ್ಥಿಕ ಬೆಳವಣಿಗೆಯು ತೊಂದರೆಗೆ ಒಳಗಾಗುವುದು ಸ್ಪಷ್ಟ ಎಂಬುದನ್ನು ಆಂತರಿಕ ಸಂಶೋಧನೆಗಳು ತೋರಿಸಿಕೊಟ್ಟಿವೆ. ಹೀಗಾಗಿ, ಹಣದುಬ್ಬರ ತಗ್ಗಿಸಲು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಪಾತ್ರಾ ವಿವರಿಸಿದ್ದಾರೆ. ಹೆಚ್ಚಿನ ಹಣದುಬ್ಬರವು ರೂಪಾಯಿ ಮೌಲ್ಯದ ಮೇಲೆ ಕೂಡ ಕೆಟ್ಟ ಪರಿಣಾಮ ಬೀರಿದೆ. ರೂಪಾಯಿ ಮೌಲ್ಯವು ಅಮೆರಿಕ ಡಾಲರ್ ಎದುರು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

## ಕಾರ್ಡ್ ವಿವರ ಸಂಗ್ರಹ : ಗಡುವು ಮತ್ತೆ ವಿಸ್ತರಣೆ

**ಮುಂಬೈ :** ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ವಿವರಗಳನ್ನು ಪಾವತಿ ವಹಿವಾಟಿನ ಪಾಲುದಾರರು 'ಟೋಕನ್' ರೂಪದಲ್ಲಿ ಮಾತ್ರ ಸಂಗ್ರಹಿಸುವ ವ್ಯವಸ್ಥೆ ಜಾರಿಗೆ ತರಲು ನೀಡಿದ್ದ ಗಡುವನ್ನು ಆರ್‌ಬಿಐ ಸೆಪ್ಟೆಂಬರ್ 30ರವರೆಗೆ ಮುಂದೂಡಿದೆ. ಉದ್ಯಮ ವಲಯ ಸಲ್ಲಿಸಿದ್ದ ಮನವಿಗಳನ್ನು ಆಧರಿಸಿ ಆರ್‌ಬಿಐ ಈ ತೀರ್ಮಾನ ಕೈಗೊಂಡಿದೆ. ಈ ವ್ಯವಸ್ಥೆಯ ಜಾರಿಗೆ ನೀಡಿದ್ದ ಗಡುವನ್ನು ಆರ್‌ಬಿಐ ಈ ಹಿಂದೆಯೂ ವಿಸ್ತರಿಸಿತ್ತು.

ವ್ಯವಸ್ಥೆಯ ಜಾರಿಯಲ್ಲಿ ಕೆಲವು ಸಮಸ್ಯೆಗಳು ಇವೆ ಎಂದು ಉದ್ಯಮ ವಲಯವು ಹೇಳಿತ್ತು. ಕಾರ್ಡ್ ಹೊಂದಿರುವವರಿಗೆ ತೊಂದರೆ ಆಗದಿರಲಿ ಎಂದು ಇವುಗಳನ್ನು ಪರಿಶೀಲಿಸಲಾಗುತ್ತಿದೆ ಸಂಬಂಧಪಟ್ಟವರ ಜೊತೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ಆರ್‌ಬಿಐ ಹೇಳಿದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?

**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಸಿನಿಮಾ ಕಿರುತೆರೆ ರಿಯಾಲಿಟಿ ಶೋಗಳಲ್ಲಿ ಬಾಲನಟರ ದುರ್ಬಳಕೆಯನ್ನು ತಡೆಯಲು ಹೊಸ ನಿಯಮವನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕರಡು ನಿಯಮವನ್ನು ರೂಪಿಸಿದ್ದು, ಜಾರಿಗೆ ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ.
- ತಮ್ಮನ ವಿದ್ಯಾಬ್ಯಾಸ, ಜೀವನ ನಿರ್ವಹಣೆಗಾಗಿ, ಹೊಸಕೋಟೆಯ ಶಾಲೆಯೊಂದರಲ್ಲಿ 9ನೇ ತರಗತಿ ಓದುತ್ತಿದ್ದ ಬಾಲಕಿ ಶಶಿಕಲಾ, ತನ್ನ ವಿದ್ಯಾಭ್ಯಾಸ ನಿಲ್ಲಿಸಿ 250 ರೂಪಾಯಿ ಕೂಲಿ ಸಿಗುವ ಕೆಲಸಕ್ಕೆ ಹೋಗುತ್ತಿದ್ದಾಳೆ.
- ಶಿರಸಿಯ ತೋಟದ ಅಂಚು, ಬೆಟ್ಟ ಪ್ರದೇಶದಲ್ಲಿ ಬೆಳೆದು ಅರ್ಧಕ್ಕರ್ಧ ಫಸಲು ಬಳಕೆಯಾಗದೆ ಹಾಳಾಗುತ್ತಿದ್ದ ಹಲಸಿನಕಾಯಿಯ ಮೌಲ್ಯವೃದ್ಧನೆ ಮಾಡಲಾಗಿದ್ದು, ಮಾರುಕಟ್ಟೆಯಲ್ಲೇ ವಾರ್ಷಿಕವಾಗಿ ಕೋಟ್ಯಂತರ ಮೊತ್ತದ ವಹಿವಾಟು ನಡೆಯುತ್ತಿದೆ.
- ಈ ವರ್ಷ ಭಾರತವು ಚೀನಾದಿಂದ ಅತೀ ಹೆಚ್ಚಿನ ಮೌಲ್ಯದ ವಸ್ತುಗಳನ್ನು ಆಮದು ಮಾಡಿಕೊಂಡಿದ್ದು, 2022ನೇ ಆರ್ಥಿಕ ವರ್ಷದಲ್ಲಿ ಆಮದು ಪ್ರಮಾಣ ಶೇ.45.51% ರಷ್ಟು ಏರಿಕೆಯಾಗಿದೆ ಎಂದು ವಾಣಿಜ್ಯ ಸಚಿವಾಲಯದ ಅಂಕಿಅಂಶಗಳು ತಿಳಿಸಿವೆ.
- ಮಧ್ಯಪ್ರದೇಶದ ಶಾಲೆಯೊಂದರ ಶಾಲಾ ಶಿಕ್ಷಕಿಯಾಗಿರುವ 24 ವರ್ಷದ ಫಿಜಾಖಾನ್ ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾದ ತನ್ನ ಪ್ರಿಯಕರನನ್ನು ಭೇಟಿಯಾಗಲು ಪಾಕಿಸ್ತಾನಕ್ಕೆ ತೆರಳಲು ಯತ್ನಿಸಿದ ಆಕೆಯನ್ನು ಇಮಿಗ್ರೇಷನ್ ಅಧಿಕಾರಿಗಳು ತಡೆದು ಪಂಜಾಬ್ ಪೊಲೀಸರಿಗೆ ಒಪ್ಪಿಸಿದ್ದಾರೆ.
- ಅಮೆರಿಕಾದಲ್ಲಿ 50 ವರ್ಷಗಳಿಂದ ಜಾರಿಯಲ್ಲಿದ್ದ ಕಾನೂನುಬದ್ಧ ಗರ್ಭಪಾತದ ಹಕ್ಕನ್ನು ರದ್ದುಕೊಳಿಸಲಾಗಿದೆ ಎಂದು ಅಮೆರಿಕಾದ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ.
- ಮಂಗಳೂರು: ಸೌರವಿದ್ಯುತ್ ಉತ್ಪಾದನೆಯಲ್ಲಿ ಕರಾವಳಿಯ ಗ್ರಾಮ ಪಂಚಾಯತ್‌ಗಳು ದಾಪುಗಾಲಿಡುತ್ತಿದ್ದು ವಿದ್ಯುತ್ ಸ್ವಾವಲಂಬನೆಗೆ ಮುಂದಾಗಿವೆ ಈಗಾಗಲೇ ಜಿಲ್ಲೆಯ 199 ಗ್ರಾ.ಪಂ.ಗಳು ಸೌರವಿದ್ಯುತ್ ಘಟಕ ಅಳವಡಿಸಿಕೊಂಡಿವೆ.
- ದಾವಣಗೆರೆಯಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ವಿಚ್ಛೇದನ ಪಡೆದಿದ್ದ ದಂಪತಿಗಳನ್ನು ನ್ಯಾಯಾಧೀಶರು ಬುದ್ಧಿ ಹೇಳಿ ಒಂದುಗೂಡಿಸಿದ್ದಾರೆ.

# ಓ ದು ಗ ರ ಅ ನಿ ಸಿ ಕೆ . . .




**ಅರ್ಥವಾಗದ ವಿಷಯವಾಗಿದೆ :** ತಾವು ಅಧಿಕಾರಕ್ಕೆ ಬಂದರೆ, ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯರು ಇರಿಸಿರುವ ಹಣವನ್ನು ದೇಶಕ್ಕೆ ತರುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಮೋದಿಯವರು ಅಲ್ಲಿನ ಸರ್ಕಾರ ಎಲ್ಲಾ ವಿವರವಾದ ಹಣಕಾಸಿನ ಮಾಹಿತಿಯನ್ನು ಪ್ರತಿವರ್ಷ ಭಾರತಕ್ಕೆ ಒದಗಿಸುತ್ತಿದ್ದರೂ, ನಮ್ಮ ಸರ್ಕಾರ ಆ ಖಾತೆಗಳಲ್ಲಿನ ಹಣವನ್ನು ದೇಶಕ್ಕೆ ತರುವ ಪ್ರಯತ್ನ ಏಕೆ ಮಾಡುತ್ತಿಲ್ಲ ಎನ್ನುವುದು ಅರ್ಥವಾಗದ ವಿಷಯವಾಗಿದೆ.

▸▸ **ಬಿ.ರಾಜಶೇಖರಪ್ಪ ರೆಡ್ಡಿ, ಬಳ್ಳಾರಿ**

**ಇದಕ್ಕೆ ಏನು ಹೇಳುವುದು ? :** ಸಾಂಕ್ರಾಮಿಕದ ಸಂದರ್ಭದಲ್ಲಿ ಹೆಚ್ಚಿನ ಹಣದುಬ್ಬರವನ್ನು ಸಹಿಸಿಕೊಳ್ಳುವುದು ಅಗತ್ಯವಾಗಿತ್ತು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ನಂತರವಷ್ಟೆ ಆರ್‌ಬಿಐ ಹಣದುಬ್ಬರ ನಿಯಂತ್ರಣದ ಕಡೆ ಗಮನ ನೀಡಿತು ಎಂದು ಅವರು ತಮ್ಮ ತೀರ್ಮಾನವನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ, ಈಗಲೂ ಹಣದುಬ್ಬರ ಏರು ಮುಖದಲ್ಲೇ ಇದೆಯಲ್ಲ ಇದಕ್ಕೆ ಏನು ಹೇಳುವುದು?

▸▸ **ನಾಗನಾಥ್ ಜೈನ್, ಬೆಂಗಳೂರು**

ಸಂಪಾದಕರು :

**ಪುಂಡಲೀಕ ಎನ್. ಕೇರೂರೆ,**

ಮುಖ್ಯ ಕಾರ್ಯನಿರ್ವಹಣಾಧಿಕಾರಿ,

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ

ಬ್ಯಾಂಕುಗಳ ಮಹಾಮಂಡಳ ನಿ.,

ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the Karnataka State Co-operative Urban Banks Federation Ltd., Bangalore - 560027.

Published at : # 132, K.H. Road, Bangalore - 560027.

Printed at : Navarathna Printers, # 35, 3rd Cross, Sudhamanagar, Bangalore – 560027.